

# ಶ್ರೀರಾಮಕೃಷ್ಣ ಮಹಿಮಾ


ಮೂಲ ಬಂಗಾಳಿ : ಅಕ್ಷಯಕುಮಾರ್ ಸೇನ್

ಕನ್ನಡಾನುವಾದ : ಕೆ.ಎಂ.ಹೆಗಡೆ ಮತ್ತು ಮಂಜುನಾಥ ಭಾಗವತ


## ಜೈ ಗುರುದೇವ

(ಡಿಸೆಂಬರ್ ೨೦೦೪ ಸಂಚಿಕೆಯಿಂದ ಮುಂದುವರೆದುದು)

### ಅಧ್ಯಾಯ ೩ — ದೈವಶಕ್ತಿಯ ಆವಿರ್ಭಾವ

**ಜಯ ರಾಮಕೃಷ್ಣ ವಾಂಛಿತ ಕಲ್ಪತರುವೆ ।**
**ಜಯ ದೀನಬಂಧು ಭಗವಾನ್ ಜಗದ್ಗುರುವೆ ॥**

**ಜಯ ರಾಮಕೃಷ್ಣರಾಪ್ತೇಷ್ಟ ಬಂಧುಗಳೇ ।**
**ನಯ ಭಯದಿ ಪಾದಧೂಳಿಯ ಬೇಡುತಿರುವೆ ॥**

೨೯೪. ಕೇಳು ಮನವೆ ಕೇಳು ಬಾಲಲೀಲೆಯಲಿ ।
ಗುರುದೇವ ರಾಜಿಸಿದ ಬಾಲರೂಪದಲಿ ॥

೨೯೫. ಕಾಮಾರಪುಕುರ ಗ್ರಾಮದ ಹುಡುಗರೊಡನೆ ।
ಆಡಿದನದೆಂತೆಂಬ ಹದನಗಳನೊಡನೆ ॥

೨೯೬. ಆ ಗ್ರಾಮದೊಳಗಿರುವನೇಕ ಬಾಲಕರು ।
ಇವನೊಡನೆ ಮನೆಬೀದಿ ಹೊಲದೊಳಾಡಿದರು ॥

೨೯೭. ಹಳ್ಳಿಗರಲಂಕಾರದಾ ಬಗೆಯನರಿತು ।
ಅಜ್ಜಿಯು ಗದಾಯಿಯನ್ನಣಿಗೊಳಿಸುತಿಹಳು ॥

೨೯೮. ಉಡುಗೆ ತೊಡುಗೆಗಳೆಲ್ಲ ಆ ರೂಢಿಯಂತೆ ।
ಸಿಂಗರಿಸಿ ಕಳುಹುವಳು ಕಣ್ಸೆಳೆಯುವಂತೆ ॥

೨೯೯. ಲಾಹಾ ಕುಟುಂಬದವರೊಲಿದು ಕಟ್ಟಿಸಿದ ।
ಅತಿಥಿಗೃಹವೊಂದಿತ್ತು ತುಂಬಾ ವಿಶಾಲ ॥

೩೦೦. ಸಾಧು ಸಂತರು ಸತತ ಬರುತಿರ್ದರಲ್ಲಿ ।
ಉಳಿಯುವರು ತಮ್ಮ ಸಾಧನೆಯ ಕ್ರಮದಲ್ಲಿ ॥

೩೦೧. ಆ ಗದಾಯಿಗೆ ಅತಿಥಿ ಗೃಹದೊಳಾಸಕ್ತಿ ।
ಹುಡುಗಾಟಿಕೆಯ ಮರೆತು ಬರುವ ಶ್ರಮವಹಿಸಿ ॥

೩೦೨. ಒಮ್ಮೊಮ್ಮೆ ತಾನೊಬ್ಬನೇ ಬರುವನಲ್ಲಿ ।
ಕೆಲವು ಸಲ ಬಹನು ಜತೆಗಾರರನು ಕೂಡಿ ॥

೩೦೩. ಸಾಧುಗಳ ಉಣಿಸು ತಿನಿಸಿನ ಬಗೆಯ ಕಾಂಬ।
ಭಜನೆ ಹಾಡುಗಳ ಕೇಳುವ ಆಸೆ ತುಂಬ ॥

೩೦೪. ಧ್ಯಾನ ಜಪದಲಿ ಕುಳಿತ ಭಂಗಿಗಳ ನೋಡಿ ।
ತಾನೆ ತಲ್ಲೀನನಾಗುವ ಮೌನಗೂಡಿ ॥

೩೦೫. ಸಾಧು ಸಂತರು ಗದಾಯಿಯ ಬಳಿಗೆ ಕರೆದು ।
ದೇವರ ಪ್ರಸಾದವನು ಕೊಡುತಿರ್ದರೊಲಿದು ॥

೩೦೬. ಸಂತಸದೊಳದನಿವನು ಸ್ವೀಕರಿಸುತ್ತಿರ್ದ ।
ಅಂತೆ ಆಚರಿಸೆ ಗೆಳೆಯರಿಗು ಪೇಳುತಿರ್ದ ॥

೩೦೭. ಒಂದು ದಿನ ಪ್ರೀತಿಯ ಗದಾಯಿಯನು ಕರೆದು ।
ಹೊಸಬಟ್ಟೆ ತೊಡಿಸಿದಳು ನಮ್ಮಜ್ಜಿ ನಲಿದು ॥

೩೦೮. ಉತ್ಸಾಹದಿಂದವನು ಹೊರಟನಲ್ಲಿಂದ ।
ಅತಿಥಿ ಮಂದಿರಕೆ ತವಕದೊಳು ನಡೆತಂದ ॥

೩೦೯. ಅಲ್ಲಿ ಬಂದೀಕ್ಷಿಸಿದ ಹಲವು ಸಂತರನು ।
ಕೆಲರು ಕೌಪೀನವನೆ ಧರಿಸಿ ಇರುವುದನು ॥

೩೧೦. ಲಂಗೋಟಿ ಧಾರಣೆಯು ಇಷ್ಟವಾಯ್ತವಗೆ ।
ತಾನಂತೆ ಇರಲು ಬಯಸಿದನು ಮನದೊಳಗೆ ॥

೩೧೧. ತಾನುಟ್ಟ ಹೊಸಬಟ್ಟೆಯನು ಬಿಚ್ಚಿ ಬಳಿಕ ।
ಕೌಪೀನದಾಕಾರದಲಿ ಸೀಳಿ ಹರಿದ ॥

೩೧೨. ಸಾಧುಗಳ ರೀತಿಯಲಿ ಕಟಿಯೊಳದ ಧರಿಸಿ ।
ಜಗದಾಧಿಪತಿಯು ಬೈರಾಗಿಯಂತಾಗಿ ॥

೩೧೩. ಸಂತಸದಿ ಕುಣಿಯುತ್ತ ತಾಯ ಬಳಿ ಬಂದು ।
ಪೇಳಿದನು ನೋಡವ್ವ ನೀನೆನ್ನನಿಂದು ॥

೩೧೪. ಸಾಧುವಾಗಿರುವೆ ನಾನೀ ದಿವಸ ಎನಲು ।
ಪರಿಕಿಸಿದಳಾ ತಾಯಿ ಬಟ್ಟೆ ಹರಿದಿರಲು ॥

೩೧೫. ಏಕಿಂತು ಗೈವೆ ಹತಭಾಗಿನಿಯ ಮಗನೆ ।
ಈ ಹುಚ್ಚು ನಿನಗೇಕೆ ಹರಿದೆ ಬಟ್ಟೆಯನೆ ॥

೩೧೬. ಹೊಸ ಬಟ್ಟೆಯನು ಸೀಳಿ ಲಂಗೋಟಿಗೈದೆ ।
ಯಾರ ಸೂಚನೆಯಿಂದಲಿಂತು ವರ್ತಿಸಿದೆ ॥